**<u>ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ</u>**
**<u>ಜೇವರ್ಗಿ</u>**

**<u>ಸಿಸಿ ನಂ.661/2021</u>**

**<u>ಚಾಸಾ-2/ಪಿಡಬ್ಲ್ಯೂ-6</u>**

| | |
|---|---|
| **ಹೆಸರು** | ಶಾಂತಗೌಡ |
| **ತಂದೆ ಹೆಸರು** | ಶಿವರಾಯಗೌಡ |
| **ವಯಸ್ಸು** | 60 ವರ್ಷಗಳು |
| **ಉದ್ಯೋಗ** | ಒಕ್ಕಲುತನ |
| **ವಾಸ ಸ್ಥಳ** | ಬಿರಾಳ ಹಿಸ್ಸಾ |

**<u>ದಿನಾಂಕ 09.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ಚಾಸಾ-1, 3 ನನಗೆ ಗೊತ್ತು. ಆರೋಪಿ ಗೊತ್ತು. ಈಗ ನಾನು ಒಂದು ದಾಖಲೆ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿನಾಂಕ 20.02.2022 ರಂದು ಬಿರಾಳ ಹಿಸ್ಸಾ ಗ್ರಾಮದ ಚಾಸಾ-1 ರವರಿಗೆ ಸೇರಿದ ಸರ್ವೆ ನಂ.47 ರಲ್ಲಿ ಆರೋಪಿತರ ಮತ್ತು ಚಾಸಾ-1 ರವರ ನಡುವೆ ಆದ ಜಗಳದ ವಿಚಾರವಾಗಿ ಮಾಡಿರುತ್ತೇನೆ. ಚಾಸಾ-1 ರವರು ಗುನ್ನೆ ಜಾಗವನ್ನು ಪೊಲೀಸರಿಗೆ ತೋರಿಸಿದ್ದು ಪಂಚನಾಮೆಯನ್ನು ಮಧ್ಯಾಹ್ನ 4.30 ರಿಂದ 5.30 ಗಂಟೆವರೆಗೆ ಮಾಡಿರುತ್ತಾರೆ. ಘಟನಾ ಸ್ಥಳದ ಪೂರ್ವಕ್ಕೆ ದೇವಪ್ಪ ರವರ ಹೊಲ, ಪಶ್ಚಿಮಕ್ಕೆ ಚಂದ್ರಾಮಪ್ಪರವರ ಹೊಲ, ಉತ್ತರಕ್ಕೆ ಸಿಂದಗಿ - ಶಹಾಪೂರ ರಸ್ತೆ, ದಕ್ಷಿಣಕ್ಕೆ ಸಿದ್ದಮಲ್ಲಪ್ಪರವರ ಹೊಲ ಇದೆ. ಪಂಚನಾಮೆಯಲ್ಲಿ ಬರೆದ ವಿಚಾರಗಳು ಪೋಲಿಸರು ನನಗೆ ಓದಿ ಹೇಳಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

ಪಂಚನಾಮೆಗೆ ನಾನು ಒಂದೆ ಸಹಿ ಮಾಡಿರುತ್ತೇನೆ. ಸರ್ವೆ ನಂ.47 ನ್ನು ಚಾಸಾ-1 ರವರ ಗಂಡ ಆರೋಪಿತರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಚಾಸಾ-1 ಮತ್ತ ಅವರ ಗಂಡನ ನಡುವೆ ಸಂಬಂಧ ಚೆನ್ನಾಗಿಲ್ಲ ಎಂದರೆ ಸರಿ. ಪಂಚನಾಮೆಯಲ್ಲಿ ಬರೆದ ವಿಚಾರಗಳು ಪೋಲಿಸರು ನನಗೆ ಓದಿ ಹೇಳಿರುತ್ತಾರೆ. ನಾನು ಮಾಗಣಗೇರಾ ಕ್ರಾಸ್ ಹತ್ತಿರ ಕಳಿತಿದ್ದಾಗ ಪೋಲಿಸರು ಅಲ್ಲಿಗೆ ಬಂದಿದ್ದು ಆಗ ಸಮಯ ಸಾಯಂಕಾಲ 4.30 ಗಂಟೆಯಾಗಿತ್ತು. ಮಾಗಣಗೇರಿ ಕ್ರಾಸ್ ಹತ್ತಿರ ಚಾಸಾ-1 ಮತ್ತು ಆರೋಪಿತರು ಇರಲಿಲ್ಲ ಎಂದರೆ ಸರಿ. ಈ ದಿನ ನನ್ನನ್ನು ನ್ಯಾಯಾಲಯಕ್ಕೆ ಚಾಸಾ-1 ರವರು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ನಾನು ಮತ್ತು ಚಾಸಾ-1 ರವರು ಒಂದೆ ಗ್ರಾಮದವರು

ಇರುವುರಿಂದ ಅವರಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರ ಗಂಡ ಹೊಲ ಮಾರಾಟ ಮಾಡಿರುವುದರಿಂದ ಚಾಸಾ-1 ರವರಿ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೆ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ